53

# ಕರ್ತನು ಯಾವಾಗಲೂ ತನ್ನ ಮಾತನ್ನು ನೆರವೇರಿಸುವನು

# (18:9-22)

ಸೂರ್ಯನು ಪ್ರಕಾಶಿಸುತ್ತಿದ್ದರೂ, ತಂಗಾಳಿ ಬೀಸುತ್ತಿತ್ತು. 1989ರ ಅಕ್ಟೋಬರ್ ತಿಂಗಳಿನಲ್ಲಿ, ನಾವುಗಳು, ನಾಶವಾಗಿದ್ದ "ಅಗೋರದಲ್ಲಿದ್ದೆವು" ಅದು "ಪೇಟೆ ಬೀದಿ" ಯಾಗಿತ್ತು. ವಿಚಾರಣೆಗಾಗಿ ಪೌಲನು ಗಲ್ಲಿಯೋನನ ಮುಂದೆ ನಿಂತಿರುವ ವಾಕ್ಯ ಭಾಗವನ್ನು ನಾನು ಓದಲು ಜನರ ಮುಂದೆ ನಿಂತಿದ್ದೆನು. ನನ್ನ ಹಿಂಭಾಗದಲ್ಲಿ ರೋಮಾಯರು ಕೂತು ವಿಚಾರಣೆ ಮಾಡುತ್ತಿದ್ದ "ಬೇಮಾ" ಎಂಬ ಕಲ್ಲಿನ ಗದ್ದಿಗೆಯಿತ್ತು. ಆ ಗದ್ದಿಗೆಯ ಹಿಂಭಾಗದಲ್ಲಿ, ಅಕ್ರೋ - ಕೊರಿಂಥದ ಗಗನ ಚುಂಬಿಸುವ ಗೋಪುರವಿತ್ತು. ನನ್ನ ಗಂಟಲನ್ನು ಸರಿಪಡಿಸಿಕೊಂಡು ಈ ರೀತಿಯಾಗಿ ಪ್ರಾರಂಭಿಸಿದೆನು: "ಗಲ್ಲಿಯೋನನು ಅಖಾಯದ ಅಧಿಪತಿಯಾಗಿರಲು ಯೆಹೂದ್ಯರು ಒಗ್ಗಟ್ಟಾಗಿ ಪೌಲನ ಮೇಲೆ ಬಿದ್ದು ಅವನನ್ನು ನ್ಯಾಯಸ್ಥಾನದ ಮುಂದೆ ಹಿಡಿದು ತಂದರು ..."

ಪ್ರವಾಸದಲ್ಲಿ ನನ್ನೊಂದಿಗಿದ್ದವರೆಲ್ಲರೂ ಕೊರಿಂಥಪಟ್ಟಣಕ್ಕೆ ಬಂದು ಸೇರಿದ್ದೆವು, ಅದು ಪೌಲನು ಸೇವೆ ಮಾಡಿದ್ದ ಪ್ರಸಿದ್ಧ ಸ್ಥಳವಾಗಿತ್ತು. ಪೌಲನು ತನ್ನ ಸೇವಾ ಪ್ರಯಾಣದಲ್ಲಿ ಸೇವೆ ಮಾಡಿದ್ದ, ಎಫೆಸ ಹಾಗೂ ಕೊರಿಂಥ ಪಟ್ಟಣಗಳು ಬಹು ಪ್ರಮುಖವಾಗಿದ್ದ ಎರಡು ಪಟ್ಟಣ ಗಳಾಗಿದ್ದವು. ಮೊದಲನೇ ಬಾರಿ ಹದಿನೆಂಟು ತಿಂಗಳುಗಳು ಹಾಗೂ ಎರಡನೆಯ ಬಾರಿ ಎರಡು ವರ್ಷಗಳ ಕಾಲ ಇಲ್ಲಿ ಸೇವೆ ಮಾಡಿದ್ದನು.

ಪೌಲನ ಕೊರಿಂಥದ ಸೇವೆಯ ಆರಂಭವನ್ನು ಈಗಾಗಲೇ ತಿಳಿದಿರುವೆವು. ಅವನು ಅಲ್ಲಿ ಭಯದಿಂದ ನಡುಗುವವನಾಗಿದ್ದನು. ಯೇಸು ಅವನಿಗೆ ಕಾಣಿಸಿಕೊಂಡು ಧೈರ್ಯಪಡಿಸಿದನ್ನು ಕುರಿತು ಹಿಂದಿನ ಪಾಠದಲ್ಲಿ ನೋಡಿದೆವು. ಈ ಪಾಠದಲ್ಲಿ, ಯೇಸುವಿನ ವಾಗ್ದಾನ ಹಾಗೂ ಅದರ ನೆರವೇರಿಕೆಯ ಕುರಿತು ನೋಡುತ್ತೇವೆ. ದೇವರು ಯಾವಾಗಲೂ ತನ್ನ ವಾಗ್ದನವನ್ನು ಈಡೇರಿಸುವನು! ಆದ್ದರಿಂದ, ನಮ್ಮ - ಆತ್ಮಗಳನ್ನು ಹಾಗೂ ಜೀವಿತಗಳನ್ನು - ಆ ಸತ್ಯದ ಮೇಲೆ ಅವಲಂಭನೆ ಮಾಡಬಹುದು.

## ಪೌಲನಿಗೆ ಯಾವುದೇ ಕೇಡು ಸಂಭವಿಸಲಾರದು ಎಂಬ ವಾಗ್ದಾನವನ್ನು ನೀಡಲಾಯಿತು (18:9, 10)

ಕರ್ತನು ಪೌಲನಿಗೆ ಕಾಣಿಸಿಕೊಂಡಾಗ, ಮೊದಲನೆಯದಾಗಿ ಅವನಿಗೆ, "ನೀನು ಹೆದರಬೇಡ; ಸುಮ್ಮನಿರದೆ ಮಾತಾಡುತ್ತಲೇ ಇರು" (ವಚನ 9). ಹಲವಾರು ಬಾರಿ ನಾವು ಭಯ ಪೀಡಿತರಾಗಿರುವದರಿಂದ ಮಾತನಾಡುವದಿಲ್ಲ. "ಪೌಲನಿಗೆ ಆತನು, ನಾನೇ ನಿನ್ನೊಂದಿಗೆದ್ದೇನೆ" ಎಂಬ ಭರವಸವನ್ನು ನೀಡಿದನು (ವಚನ 10ಎ). ನಾವು ಅದನ್ನು ನೆನಪು ಮಾಡಿಕೊಳ್ಳುವಾಗ, ಭಯವಿಲ್ಲದೆ ಮಾತನಾಡಬಹುದು (ಮತ್ತಾಯ 28:19, 20).

ನಂತರ ದೇವರು ಅವನಿಗೆ ಎರಡು ವಾಗ್ದಾನಗಳನ್ನು ನೀಡಿದನು: ಒಂದು ಮಾತಿನ ವಾಗ್ದಾನವಾದರೆ ಇನ್ನೊಂದು ಕಾರ್ಯದ ವಾಗ್ದಾನ. "ಮೊದಲನೆಯದು, ಯಾರೂ ನಿನ್ನ

ಮೇಲೆ ಬಿದ್ದು ಕೇಡು ಮಾಡುವದಿಲ್ಲ'' (ವಚನ 10ಬಿ). ತೀವ್ರವಾದಿಗಳಾದ ಯೆಹೂದ್ಯರ ಭಯ ಅವನಿಗಿತ್ತು ಎಂಬ ಸೂಚನೆಯನ್ನು ಇಲ್ಲಿ ನೀಡಲಾಗಿದೆ. ಅವನು ಕೊರಿಂಥದಲ್ಲಿ ಎಲ್ಲಾ ಒಳ್ಳೆಯ ಕಾರ್ಯವನ್ನು ಮುಗಿಸಿ, ಯೆಹೂದ್ಯರು ಇವನಿಗೆ ತೊಂದರೆ ನೀಡುವದರೊಳಗಾಗಿ, ಅಲ್ಲಿಂದ ತಪ್ಪಿಸಿಕೊಳ್ಳುವ ಯೋಚನೆಯನ್ನು ಮಾಡಿದ್ದನು. ಇಂಥ ಇಕ್ಕಟ್ಟಾದ ಸನ್ನಿವೇಶದಲ್ಲಿ, ಬಲವುಳ್ಳ ವ್ಯಕ್ತಿಯನ್ನು ಕಂಡನು. ಕ್ರಿಸ್ತನು ಅವನಿಗೆ ಸಂತೈಸುವ ವಾಗ್ದಾನವನ್ನು ನೀಡಿದನು, ಇತರ ಪಟ್ಟಣದಲ್ಲಿ ಅವನಿಗೆ ಹಿಂಸೆಯಾಗಿದ್ದರೂ, ಕೊರಿಂಥದಲ್ಲಿ ಅದು ಉಂಟಾಗುವ ಸಂಭವವಿರಲಿಲ್ಲ.

ಅದರ ಸಂಗಡ ಯೇಸು ಅವನಿಗೆ ಭರವಸವುಳ್ಳ ವಾಗ್ದಾನವನ್ನ ನೀಡಿ: "ಈ ಪಟ್ಟಣದಲ್ಲಿ ನನಗೆ ಬಹಳ ಮಂದಿ ಇದ್ದಾರೆ'' (ವಚನ 10ಸಿ).[1] ಇದರಲ್ಲಿ, "ದೇವರು ತನ್ನ ಹೆಸರಿಗಾಗಿ ಅವರೊಳಗಿಂದ ಒಂದು *ಪ್ರಜೆಯನ್ನು* ಆರಿಸಿಕೊಳ್ಳುವನು'' ಎಂಬ (15:14; ಒತ್ತಿ ಹೇಳಿದ್ದು ನನ್ನದು). ವಾಗ್ದಾನವು ಅಡಕಗೊಂಡಿತ್ತು. ಹೃದಯಗಳನ್ನು ಬಲಾತನಾದ ದೇವರಿಗೆ, ಕೊರಿಂಥದಲ್ಲಿ ಸ್ಪಂಧಿಸುವ ಜನರು ಇದ್ದರು ಎಂದು ತಿಳಿದಿತ್ತು. ಅವರಿಗೆ ಅವಕಾಶವನ್ನು[2] ನೀಡುವುದಾದರೆ, ಅ ಅನ್ಯ ಜನರು ದೇವರ ಕಡೆಗೆ ತಿರುಗುವರೆಂದು ತಿಳಿದಿದ್ದನು. ಇದರ ಪರಿಮಾಣವಾಗಿ, ಅವನು ಅಲ್ಲಿ ತಂಗುವುದಾದರೆ ಮತ್ತು ಪ್ರಸಂಗಿಸುವುದಾದರೆ, ಅನೇಕರು ದೀಕ್ಷಾಸ್ನಾನ[3] ಮಾಡಿಸಿಕೊಳ್ಳುವರು ಎಂಬ ವಾಗ್ದಾನವನ್ನು ಯೇಸು ನೀಡಿದ್ದನು. (ದೇವರು "ಅನೇಕ ಜನರು'' ಇರುವರು ಎಂದು ಹೇಳುವನು - ನಾವು ಅವರಿಗೆ ಸಾರದ ಹೊರತು - ಅವರು ಆತನನ್ನು ಅರಿಯಲು ಸಾಧ್ಯವಿಲ್ಲ!)

ಯೇಸುವಿನ ಭರವಸವು ಪೌಲನನ್ನು ಕಾರ್ಯಪ್ರವೃತ್ತನನ್ನಾಗಿ ಮಾಡಿತು. "ಅವನು ಒಂದು ವರುಷ ಆರು ತಿಂಗಳು ಅಲ್ಲೇ ಇದ್ದುಕೊಂಡು ಆ ಜನರಿಗೆ ದೇವರ ವಾಕ್ಯವನ್ನು ಉಪದೇಶಮಾಡುತ್ತಿದ್ದನು'' (ವಚನ 11). ಈಗಾಗಲೇ ಅವನು ಕಳೆದಿದ್ದ ದಿವಸಗಳೊಂದಿಗೆ, ಈ ದಿವಸಗಳನ್ನು ಸೇರ್ಪಡೆ ಮಾಡಿರುವ ಕುರಿತು ನಾವು ಅರಿತಿರುವದಿಲ್ಲ. ವಚನ 18ರಲ್ಲಿರುವ ("ಅನೇಕ ದಿವಸ'') ಎಂಬುದು ಹದಿನೆಂಟು ತಿಂಗಳುಗಳೊಂದಿಗೆ[4] ಸೇರ್ಪಡೆ ಆಗಿರುವದನ್ನು ನಾವು ಅರಿಯೆವು. ಆದರೆ ಹೇಗೂ ಪೌಲನು ಒಂದು ವರುಷ ಆರು ತಿಂಗಳು ಅಲ್ಲಿದ್ದನು ಎಂಬದು ನಮಗೆ ಕ್ಷೇಮವೇ. ಅವನ ಮೂರು ಪ್ರಯಾಣಗಳಲ್ಲಿ ಅತಿ ಹೆಚ್ಚು ದಿವಸಗಳನ್ನು ಕಳೆದ ಎರಡನೇ ಪಟ್ಟಣವಾಗಿತ್ತು. ಕೊರಿಂಥದಲ್ಲಿ ಸಭೆಯನ್ನು ಸ್ಥಾಪಿಸಲು ಹೆಚ್ಚಾದ ದಿನವನ್ನು ಪೌಲನು ಕಳೆದಿದ್ದನು, ನಾವುಗಳು ಬೀಜಗಳನ್ನು ಬಿತ್ತುವ ಸಮಯದಲ್ಲಿ, ಭೂಮಿಯನ್ನು ಪರಿಶೀಲಿಸುತ್ತಿರುತ್ತೇವೆ!

## ವಾಗ್ದಾನದಂತೆ: ಪೌಲನಿಗೆ ಯಾವ ಕೇಡು ಸಂಭವಿಸಲಿಲ್ಲ (18:12-18)

ದೇವರ ವಾಗ್ದಾನಗಳು ವರ್ಷಗಳ ನಂತರ ನೆರವೇರುತ್ತವೆ. ಆದರೆ ಇಲ್ಲಿ ಅದು ತಕ್ಷಣವೇ ನೆರವೇರಿತು, ದೇವರು ಅನ್ಯನೊಬ್ಬನ ಮೂಲಕ ಈ ಕಾರ್ಯವನ್ನು ನೆರವೇರಿಸಿದನೆಂದು - ಲೂಕನು ತಿಳಿಸುತ್ತಾನೆ.

"ಗಲ್ಲಿಯೋನನು ಅಖಾಯದ ಅಧಿಪತಿಯಾಗಿರಲು ಯೆಹೂದ್ಯರು ಒಗ್ಗಟ್ಟಾಗಿ ಪೌಲನ ಮೇಲೆ ಬಿದ್ದು ಅವನನ್ನು[5] ನ್ಯಾಯಸ್ಥಾನದ ಮುಂದೆ ಹಿಡಿತಂದರು'' (ವಚನ 12). ಪೌಲನು ಮೂರು ಪ್ರಯಾಣಗಳಲ್ಲಿ, ಅವನು ಸಂಧಿಸಿದ ರೋಮಾಯದ ಅಧಿಕಾರಿಯಾದ ಗಲ್ಲಿಯೋನನು ಬಹು ಪ್ರಮುಖನು. ಗಲ್ಲಿಯೋನನ ಸಹೋದರನು, ಸ್ತೊಯಿಕರ ಸೆನೇಕ ಎಂಬ ತತ್ವಜ್ಞಾನಿಯಾಗಿದ್ದು, ನೀರೋ ಚಕ್ರವರ್ತಿಗೆ ಬೋಧಕನಾಗಿದ್ದನು. ಶ್ರೀಮಂತರಾದ ಅನೇಕ ಬರವಣಿಗೆಕಾರರು[6] ಇವನ ಹೆಸರನ್ನು ಹೆಸರಿಸಿರುವರು, ಅವನು ಅತಿ ವರ್ಚಸ್ಸಿನ ಮನುಷ್ಯನಾಗಿದ್ದನು. ಕ್ರಿ.ಶ. ಜುಲೈ 51ರಲ್ಲಿ ಗಲ್ಲಿಯೋನನು ಅಖಾಯದ ಅಧಿಪತಿಯಾಗಿದ್ದನು. ಡೆಲ್ಫಿಯ[7] ಬರವಣಿಗೆಯಲ್ಲಿ ಇದನ್ನು ತಿಳಿಸಿಲಾಗಿದೆ.

ಇತರೆ ಪಟ್ಟಣಗಳಲ್ಲಿ ನಡೆದಂತೆ, ಯೆಹೂದ್ಯರು ಅವನನ್ನು ಪಟ್ಟಣದ ಅಧಿಪತಿಗಳ ಬಳಿಗೆ ಕರೆತರಲಿಲ್ಲ, ಇಲ್ಲಿ ಅವನನ್ನು ಅಖಾಯದ[8] ಅಧಿಪತಿಯ ಬಳಿಗೆ ಕರೆತಂದರು. ಶಕ್ತಿಶಾಲಿಯಾದ ಈ ಅಧಿಕಾರಿಯು, ರೋಮಾಯದ ಇತರೆ ಪ್ರಾಂತಗಳಲ್ಲಿಯೂ ಆಡಳಿತ ನಡೆಸುತ್ತಿದ್ದನು, ಇಲ್ಲಿರುವ ನ್ಯಾಯಯುತವಾದ ಹಾಗೂ ರಾಜಕೀಯವಾದ ಘಟನೆಗಳನ್ನು ಒತ್ತಿ ಹೇಳಲಾಗುವದಿಲ್ಲ.

ರೋಮಾಯದ ಅಧಿಕಾರಿಗಳು ಮೊದಲು ಕೊರಿಂಥಕ್ಕೆ ಬಂದಾಗ, ಯೆಹೂದ್ಯರು ಪೌಲನನ್ನು ಗಲ್ಲಿಯೋನನ ಮುಂದೆ ಕರೆತಂದರು ಜನರ ಈ ಕಾರ್ಯಗಳನ್ನು ನೋಡಿ, ಅವರನ್ನು ಮೆಚ್ಚುವನು ಎಂಬ ಅಭಿಪ್ರಾಯವೂ ಇರಬಹುದು, ಆದರೆ ಅವರ್‍ಯಾರು ಗಲ್ಲಿಯೋನನ ಪ್ರಾಮಾಣಿಕತೆಯನ್ನು ಗ್ರಹಿಸಲಿಲ್ಲ.

ವಚನ 12ರಲ್ಲಿ ಯೆಹೂದ್ಯರು ಪೌಲನನ್ನು "ನ್ಯಾಯಸ್ಥಾನದ ಮುಂದೆ ಹಿಡಿತಂದರು" ಎಂದು ಹೇಳುತ್ತದೆ. "ನ್ಯಾಯಸ್ಥಾನ" ಎಂಬ ಪದವನ್ನು ಗ್ರೀಕ್‌ನಲ್ಲಿ *ಬೇಮ* ಎನ್ನುವರು. *ಬೇಮ* ಎಂಬುದು ಕೊರಿಂಥದ ಅಗೋರದಲ್ಲಿದ್ದ ಒಂದು ಎತ್ತರವಾದ ವೇದಿಕೆ, ಅದನ್ನು ಕಲ್ಲಿನಿಂದ ಮಾಡಿ, ಅದರ ಮೇಲೆ ಅಮೃತ ಶಿಲೆ ಹಾಕಿದ್ದರು. ಅದನ್ನು ಸಾರ್ವಜನಿಕ ಕಾರ್ಯಕ್ರಮಕ್ಕೂ ಹಾಗೂ ಮಾತನಾಡುವದಕ್ಕೂ[9] ಬಳಸುತ್ತಿದ್ದರು. ನ್ಯಾಯ ವಿಚಾರಣೆಗೂ ಸಹ ಆ ಸ್ಥಳವನ್ನು ಉಪಯೋಗಿಸುತ್ತಿದ್ದರು.

ಹಳೆಯ ಕೊರಿಂಥದಲ್ಲಿ, ಆ ಕಲ್ಲನ್ನು ಈಗಲೂ ನೋಡಬಹುದು. ಅದು ಸುರಕ್ಷಿತವಾಗಿ ಕಾಪಾಡಲ್ಪಟ್ಟಿದೆ, ಆ ಕಲ್ಲಿನ ಮೇಲ್ಭಾಗದಲ್ಲಿ ನೀಲಿ ಹಾಗೂ ಬಿಳಿಯ ಹಾಸಿನ ತುಂಡುಗಳಿವೆ. ಬೇಮದ ಎದುರುಭಾಗದಲ್ಲಿ ಅಪರಾಧಿ ನಿಂತುಕೊಳ್ಳುವ ಒಂದು ಸ್ಥಳವೂ ಇರುತ್ತದೆ. ಪೌಲನು ಸರಪಳಿಯಿಂದ ಕಟ್ಟಲ್ಪಟ್ಟವನಾಗಿ, ಗಲ್ಲಿಯೋನನ ತೀರ್ಪಿಗೆ ಕಾದು ಕೊಂಡಿರುವ ಚಿತ್ರಣವನ್ನು ಮಾಡಿಕೊಳ್ಳಬಹುದು.

ಯೆಹೂದ್ಯರು, [ಪೌಲನನ್ನು] "ನ್ಯಾಯಸ್ಥಾನದ ಮುಂದೆ ಹೇಗೆ ಹಿಡಿತಂದರು" ಎಂಬುದನ್ನು ತಿಳಿಸಿರುವದಿಲ್ಲ. ಒಂದು ವೇಳೆ ಅವನನ್ನು ಎಳೆದು ತಂದಿರಬಹುದು (16:19); ಒಂದು ವೇಳೆ ನ್ಯಾಯಲಯವು ಅವನಿಗೆ ಬರಹೇಳಿರಬಹುದು. ಅಲ್ಲಿ ಅನೇಕರು ಸೇರಿರುವಾಗ, ಯೆಹೂದ್ಯರು ಅವನ ಮೇಲೆ ಅಪವಾದವನ್ನು ಮಾಡಿರಬಹುದು: "ಇವನು ದೇವರನ್ನು ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿ ಪೂಜಿಸುವದಕ್ಕೆ ಜನರನ್ನು ಒಡಂಬಡಿಸುತ್ತಾನೆ ಎಂದರು" (18:13). "ಧರ್ಮಶಾಸ್ತ್ರ" ಎಂದರೆ ಮೋಶೆಯ "ನೇಮಗಳು"[10] ಎಂಬುದು ಕೆಲವರ ಅಭಿಪ್ರಾಯ, ಅದು ಅವನ ನೇಮಗಳೆಂದು ಅವರು ಭಾವಿಸಿದ್ದರೆ, ಯೆಹೂದ ಮತವು "ನ್ಯಾಯವಾದ ಧರ್ಮವಾಗಿರುವದರಿಂದ,"[11] ಯೆಹೂದ್ಯರನ್ನೋ ಕಾಪಾಡಿ, ಪೌಲನು ಅವರಲ್ಲಿ ಗೊಂದಲ ಮಾಡದಂತೆ ತಪ್ಪಿಸಬೇಕಿತ್ತು. ಅವರು ರೋಮಾಯರ ನಿಯಮಕ್ಕನುಸಾರವಾಗಿ ಅಪವಾದ ಮಾಡಿದ್ದರೆ ತಪ್ಪಿಸಬೇಕಿತ್ತು. ಅವರು ರೋಮಾಯರ ನಿಯಮಕ್ಕನುಸಾರವಾಗಿ ಅಪವಾದ ಮಾಡಿದ್ದರೆ, ಕ್ರೈಸ್ತರು "ನ್ಯಾಯ ಸಮ್ಮತವಲ್ಲದ ಧರ್ಮವನ್ನು ಪ್ರತಿಪಾದಿಸುತ್ತಾರೆ" ಎಂಬ ದೂರನ್ನು ನೀಡಿದ್ದರು, ಅದನ್ನು ರೋಮಾಯರು ಸಂರಕ್ಷಿಸುವ ಅಗತ್ಯವಿರಲಿಲ್ಲ. ಯಾವ ರೀತಿಯಲ್ಲಾದರೂ ಸರಿಯೇ. ಪೌಲನು (ಹಾಗೂ ಎಲ್ಲಾ ಕ್ರೈಸ್ತರು) ರೋಮಾಯರ ಅಧಿಕಾರಿಗಳಿಂದ ಶಿಕ್ಷೆಯನ್ನು ಹೊಂದಲು ಅರ್ಹನು ಎಂದು ತಿಳಿಸಿದರು.

ಈ ಸಮಯದಲ್ಲಿ, ದೇವರ ವಾಗ್ದಾನಗಳ ಮೇಲೆ ಸಂಶಯವಾಗುತ್ತದೆ. ಕರ್ತನು, ಪೌಲನಿಗೆ "ನಿನಗೆ ಯಾರೂ ಕೇಡುಮಾಡಲಾರರು" ಎಂದು ಹೇಳಿರುವಾಗಲೂ, ಅವನು ಜನರ ಅಕ್ರಮಣಕ್ಕೆ ಈಗ ಒಳಗಾಗಿದ್ದನು. ಪ್ರತಿಪಟ್ಟಣಗಳಲ್ಲಿ ಪೌಲನಿಗೆ ಯೆಹೂದ್ಯರಿಂದ ಈ ವಿಧವಾದ ಸಮಸ್ಯೆ ಉಂಟಾಗುವಾಗ, ಅವನು ತಪ್ಪಿಸಿಕೊಂಡಿದ್ದನು (13:50; 14:5, 6, 19; 16:19-24; 17:6-10, 13). ಈ ಸಂದರ್ಭದಲ್ಲಿ ಪೌಲನು ಕೇಡಿನಿಂದ ಹೇಗೆ ತಪ್ಪಿಸಿಕೊಳ್ಳಬಹುದಿತ್ತು?

ವಚನ 14ರಲ್ಲಿ ಈ ಪ್ರಾರಂಭವಾಗುತ್ತದೆ, “ಪೌಲನು ಪ್ರತಿವಾದ ಮಾಡಬೇಕೆಂದಿದ್ದಾಗ ...” ಬಹುಶಃ ಗಲ್ಲಿಯೋನನಿಗೆ ಸುವಾರ್ತೆ ಸಾರಲೂ ಸಿದ್ಧವಾಗುತ್ತಿರಬಹುದು (ನೋಡಿರಿ ಅಪೊಸ್ತಲರ ಕೃತ್ಯಗಳು 22; 23; 24; 26). ಅವನು ಮಾತನಾಡುವ ಮೊದಲೇ ಆ ಅಧಿಪತಿಯು ಮಾತನಾಡಿದನು:

> ಗಲ್ಲಿಯೋನನು ಯೆಹೂದ್ಯರಿಗೆ - ಎಲೈ ಯೆಹೂದ್ಯರೇ, ಅನ್ಯಾಯವು ದುಷ್ಕಾರ್ಯವು ಇಂಥದೇನಾದರೂ ಇದ್ದಪಕ್ಷಕ್ಕೆ ನಾನು ನಿಮ್ಮ ಮಾತನ್ನು ಸಹನದಿಂದ ಕೇಳುವದು ನ್ಯಾಯವೇ. ಆದರೆ ನೀವು ಮಾಡುವ ವಿವಾದವು ಬೋಧನೆಯನ್ನೂ ಹೆಸರುಗಳನ್ನೂ[12] ನಿಮ್ಮ ಧರ್ಮಶಾಸ್ತ್ರವನ್ನೂ ಕುರಿತದ್ದಾಗಿರುವದರಿಂದ ಅವಗಳನ್ನು ನೀವೇ ನೋಡಿ ಕೊಳ್ಳಿರಿ (ವಚನಗಳು 14ಬಿ, 15).

ಪ್ರಪಥಮವಾಗಿ ಯೆಹೂದ್ಯರೊಂದಿಗೆ ಪೌಲನು ಸೆಣಸಾಡುವಾಗ, ಇದೇ ಮೊದಲ ಸಾರಿ, ಅವನ ವೈರಿಗಳು ರೋಮಾಯದ ಒಬ್ಬ ಯಥಾರ್ಥನಾದ ಅಧಿಪತಿಯನ್ನು ಮುಖಾಮುಖಿಯಾಗಿ ಎದುರಿಸಿದರು![13] ಇಲ್ಲಿ ಯೂದ ಮತಕ್ಕೂ ಮತ್ತು ಕ್ರೈಸ್ತ ಮತಕ್ಕೂ ನಡುವೆ ಇರುವ ಪ್ರಾಥಮಿಕ ವ್ಯತ್ಯಾಸಗಳ ಕುರಿತು ಗಲ್ಲಿಯೋನನಿಗೆ ಗೊಂದಲ ಉಂಟಾಗಿರಬಹುದು. ಆದರೆ ಇದನ್ನು ಅವನು ಅರ್ಥಮಾಡಿಕೊಂಡನು: ಪೌಲ ಮತ್ತು ಯೆಹೂದ್ಯರ ನಡುವೆ ಯಾವುದೇ ವ್ಯತ್ಯಾಸವಿದ್ದರೂ, ಅದು ಅವನ ಅಧಿಕಾರಕ್ಕೆ ಒಳಪಟ್ಟಿರಲಿಲ್ಲ, ಒಂದು ವೇಳೆ ಯೆಹೂದ್ಯರ ನಡುವೆ ಯಾವುದೇ ವ್ಯತ್ಯಾಸವಿದ್ದರೂ, ಅದು ಅವನ ಅಧಿಕಾರಕ್ಕೆ ಒಳಪಟ್ಟಿರಲಿಲ್ಲ, ಒಂದು ವೇಳೆ ಯೆಹೂದ್ಯರು ರೋಮಾಯರ ಕಾನೂನಿನ[14] ಪ್ರಕಾರ ತೀರ್ಪನ್ನು ಬಯಸಿದ್ದರೆ, ಆ ಸಮಸ್ಯೆಯು ಅವರ ಸ್ವಂತ ಕಾನೂನಿಗೆ ಒಳಪಟ್ಟಿದ್ದರಿಂದ, ಆ ಪ್ರಕರಣವನ್ನು ರದ್ದು ಮಾಡಿದನು.

ನ್ಯಾಯಸ್ಥಾನವನ್ನು ಅವರು ಬಿಟ್ಟು ಹೋಗಬೇಕೆಂಬ ಗಲ್ಲಿಯೋನನ ಆ ದೇಶವು ಯೆಹೂದ್ಯರಿಗೆ ಆಶ್ಚರ್ಯ ಉಂಟುಮಾಡಿತು. ಆ ಸ್ಥಳವನ್ನು ತಟ್ಟನೆ ಬಿಡದವರಿಗೆ ಕೋಲಿನ ಶಿಕ್ಷೆ[15] ಉಂಟಾಗುತ್ತಿತ್ತು. “ಆದ್ದರಿಂದ ಗಲ್ಲಿಯೊನನು ಅವರನ್ನು ನ್ಯಾಯಸ್ಥಾನದ ಎದುರಿನಿಂದ ಹೊರಡಿಸಿ ಬಿಟ್ಟನು” (ವಚನ 16ಎ).

ಲೂಕನು ಒಂದು ವೆಂಗ್ಯದ ಮಾತನ್ನು ಸೇರಿಸಿದನು, “ಆಗ ಜನರೆಲ್ಲರು ಸಭಾಮಂದಿರದ ಅಧ್ಯಕ್ಷನಾದ ಸೋಸ್ಥೆನನನ್ನು ಹಿಡಿದುಕೊಂಡು ನ್ಯಾಯಸ್ಥಾನದ ಮುಂದೆಯೇ ಹೊಡೆದರು. ಗಲ್ಲಿಯೋನನು ಅವುಗಳಲ್ಲಿ ಒಂದನ್ನೂ ಲಕ್ಷ್ಯಕ್ಕೆ ತರಲಿಲ್ಲ” (ವಚನ 17ಎ). ಈ ಹಿಂದೆ ಲೂಕನು ಕ್ರಿಸ್ತನ (ಕ್ರಿಸ್ಪನ) ಪರಿವರ್ತನೆಯ ಕುರಿತು ತಿಳಿಸಿದ್ದನು, “ಅವನು ಸಭಾಮಂದಿರದ ಅಧ್ಯಕ್ಷನಾಗಿದ್ದನು” (ವಚನ 8); ಸೋಸ್ಥೆನನು ಅವನ ಸ್ಥಾನದಲ್ಲಿದ್ದನು.[16] ಸೋಸ್ಥೆನನೇ ಪೌಲನ ಕುರಿತು ಅಪವಾದ ಮಾಡಬೇಕಿತ್ತು, ಆದರೆ ಅವನು ಅದನ್ನು ಮಾಡದೆ ಹೋದದ್ದರಿಂದ, ಯೆಹೂದ್ಯರು ಅವನನ್ನು ತೆಗಳಿರಬಹುದು.

“ಸೋಸ್ಥೆನನನ್ನು” ಹೊಡೆದವರು “ಯಾರು” ಎಂಬುದು ಸ್ಪಷ್ಟವಿಲ್ಲ. ಪುರಾತನ ಹೇಳಿಕೆಯ ಪ್ರಕಾರ “ಗ್ರೀಕರು” ಅವನನ್ನು ಹೊಡೆದಿದ್ದರು (ನೋಡಿರಿ KJV). ಹಾಗಾದರೆ, ಹೊಡೆದವರು, ಅಗೋರದ ಬಳಿಯಲ್ಲಿದ್ದ[17] ದೊಂಬಿಕಾರರಾಗಿರಬಹುದು, ಅವರು ಯೆಹೂದ್ಯರನ್ನು ದ್ವೇಷಿ ಸುತ್ತಿದದ್ದರಿಂದ, ಈ ಅವಕಾಶವನ್ನು ಬಳಸಿಕೊಂಡರು. ಉತ್ತಮವಾದ ಬರವಣಿಗೆಯು ಸರಳವಾಗಿ “ಅವರು” ಎಂದು ತಿಳಿಸುತ್ತದೆ. ಒಂದು ವೇಳೆ “ಅವರು” ಯೆಹೂದ್ಯರು ಆಗಿರಬಹುದು (ವಚನಗಳು 14-16). ಯೆಹೂದ್ಯರು ತಮ್ಮ ನಾಯಕನಿಗೆ ತಿರುಗಿ ಬಿದ್ದರು ಎಂಬ ಅರ್ಥವೇ, ಅವನು ಆ ಸ್ಥಿತಿಯನ್ನು ಸಮರ್ಥಿಸಿಕೊಂಡಿದ್ದರೆ, ಯೆಹೂದ್ಯರಿಗೆ ಅವಮಾನವಾ ಗುತ್ತಿರಲಿಲ್ಲ?

ಮುಂದಿನ ಮಾತುಗಳು ವಿಚಿತ್ರವಾಗಿವೆ: “ಗಲ್ಲಿಯೋನನು ಅವುಗಳಲ್ಲಿ ಒಂದನ್ನೂ ಲಕ್ಷಕ್ಕೆ ತರಲಿಲ್ಲ” (ವಚನ 17ಬಿ). ಮುಗ್ಧ ಮನುಷ್ಯನಿಗೆ ಹೊಡೆದಾಗಲೂ ಗಲ್ಲಿಯೋನನು ಯಾವುದೇ

ಸ್ಪಂದನೆಯನ್ನು ನೀಡಲಿಲ್ಲ. ಎಂಬುದಾಗಿ ಲೌಕಿಕ ಬರಹಗಾರರ[18] ಹೇಳಿಕೆ. ಬಹುಶಃ ಸೋಸ್ಥೆನನ ಹೊಡೆತದ ಬಗ್ಗೆ ಮಾತನಾಡದೆ, ಯೆಹೂದ್ಯರು ಪೌಲನ ವಿರುದ್ಧ ಮಾಡಿದ ದೂರಿನ ಕುರಿತಾಗಿರುತ್ತದೆ. ಬಾರ್ಕ್ಲೆಯವರ ಹೇಳಿಕೆಯಂತೆ "ಗಲ್ಲಿಯೋನನು ಪಕ್ಷಪಾತಿಯಾಗಿರದೆ, ಯೆಹೂದ್ಯರ ಗುಂಪಿನ[19] ಪ್ರಭಾವಕ್ಕೆ ಮಣಿಯಲಿಲ್ಲ" ಎಂಬ ಅರ್ಥವಾಗಿದೆ.

ವಚನ 17ರ ಅರ್ಥ ಏನೇ ಇರಬಹುದು, ಆ ಘಟನೆ ತಬ್ಬಿಬ್ಬುಮಾಡುತ್ತಿತ್ತು. ಅಲ್ಲಿ ಪೌಲನಿಗೆ ಯಾವುದೇ ಕೇಡು ಸಂಭವಿಸಲಿಲ್ಲ. ಮತ್ತು ಅವನಿಗೆ ಸಮರ್ಥನೆ[20] ಉಂಟಾಯಿತು. ಅವನನ್ನು ಶಿಕ್ಷಿಸಲು ಮುಂದಾದ ಯೆಹೂದ್ಯರಿಗೆ ಶಿಕ್ಷೆ ಉಂಟಾಯಿತು. ದೇವರು ತನ್ನ ವಾಗ್ದಾನವನ್ನು ಈಡೇರಿಸಿದನು - ರೋಮಾಯದ ಅದಿಪತಿಯ ಮೂಲಕ, ಬಯಸಿದ ಸಂಗತಿಯನ್ನು ದೇವರು ಮಾಡಿದನು!

ಗಲ್ಲಿಯೋನನು, ಪೌಲನ ಮುಗ್ಧತೆಯನ್ನು ಗ್ರಹಿಸಿದ್ದರಿಂದ, "ಸಭೆಗೆ ಹತ್ತು ವರ್ಷಗಳ ಕಾಲ ಸಮಾಧಾನ ಉಂಟಾಯಿತು"[21] ಅಪವಾದದ ಕುರಿತ ಗಲ್ಲಿಯೋನನ ನಿರ್ಣಯವು ಇತರ ಪ್ರಾಂತಗಳಿಗೂ, ನ್ಯಾಯಸಮ್ಮತವಾದ ನಿಯಮಗಳಾದವು. ಇದರಿಂದ ಪೌಲನಿಗೆ ಅಲ್ಲಿಂದ ಬಿಡುಗಡೆಯಾಯಿತು. ಅನೇಕ ವರ್ಷಗಳ ನಂತರ ಯೆಹೂದ್ಯರು, ರೋಮಾಯರ ಅಧಿಕಾರಿಗಳಿಂದ ಪೌಲನಿಗೆ ಶಿಕ್ಷೆ ವಿಧಿಸಲು ಪ್ರಯತ್ನಿಸಿದರು.

ಪೌಲನ ವಿಚಾರಣೆಯ ನಂತರ (ವಿಚಾರಣೆ ಆಗದೆ ಇರುವಾಗಲೂ) ಅವನು ಅಲ್ಲಿ ಅನೇಕ ದಿವಸಗಳ ಕಾಲ ಇದ್ದನು (ವಚನ 18ಎ).[22] "ಈ ಅನೇಕ ದಿವಸಗಳಲ್ಲಿ" ಪೌಲನು ಮಾಡದ ಕಾರ್ಯಗಳನ್ನು ಲೂಕನು ದಾಖಲು ಮಾಡಿರುವದಿಲ್ಲ. ಆದರೆ ಕರ್ತನು ಮಾಡಿದ ಎರಡನೆಯ ವಾಗ್ದಾನವನ್ನು ಗ್ರಹಿಸಲಾಯಿತು: ಪೌಲನು ಪ್ರಸಂಗಿಸುವದರಲ್ಲೂ, ಉಪದೇಶ ದಲ್ಲೂ ಮುಂದುವರಿಯುವಾಗ, ಇನ್ನೂ ಅನೇಕರು ಕ್ರೈಸ್ತರಾದರು.

ಸೋಸ್ಥೆನನ್ನು ಹೊಡೆದ ನಿಮಿತ್ತವಾಗಿಯು ಈ ಕಾರ್ಯ ಸಂಭವಿಸಿರಬಹುದು. ಪೌಲನು ಕೊರಿಂಥದ ಕ್ರೈಸ್ತರಿಗೆ ಬರೆದಾಗ, ಸೋಸ್ಥೆನನು ಎಂಬ ಜೊತೆ ಸೇವಕನ ಕುರಿತು, ಹೇಳಿದನು. ಅವನು ಸಾಮಾನ್ಯವಾಗಿ ಕೊರಿಂಥದವರಿಗೆ ಪರಿಚಯವಿದ್ದವನು, ನಂತರ ಪೌಲ ಮತ್ತು ಕ್ರಿಸ್ಪನು ಸೋಸ್ಥೆನನನ್ನು ಸಂದಿಸಿ, ಅವನ ಗಾಯಗಳನ್ನು ತೊಳೆದು, ಅವನಿಗೆ ಯೇಸುವಿನ ವಾರ್ತೆಯನ್ನು ಹೇಳಿರಬಹುದು - ಅಂತಹ ವಿಷಯವನ್ನು ಸದ್ಯಕ್ಕೆ ಕೈ ಬಿಡಬಹುದು.[23]

ಕೊರಿಂಥದಲ್ಲಿ ಪರಿವರ್ತನೆಗೊಂಡ ಇನ್ನೊಬ್ಬ ಮಹಾವ್ಯಕ್ತಿಯ ಕುರಿತಾಗಿಯೂ ನೋಡುತ್ತೇವೆ. ಪೌಲನು ರೋಮಾಯದಿಂದ ಕೊರಿಂಥದವರಿಗೆ ಬರೆಯುವಾಗ, ಅವನು ಈ ವಂದನೆಯನ್ನು ಸೇರಿಸಿ: "ಈ ಪಟ್ಟಣದ ಖಜಾನೆಯ ಮೇಲ್ವಿಚಾರಕನಾಗಿರುವ ಎರಸ್ತನೂ ನಿಮ್ಮನ್ನು ವಂದಿಸುವನು" (ರೋಮಾಪುರ 16:23). ಕೊರಿಂಥದಲ್ಲಿ ಅತಿ ವರ್ಚಸ್ಸನ್ನು ಹೊಂದಿದ್ದವರು ಮಾತ್ರ ಪರಿವರ್ತನೆಗೊಂಡ ಕ್ರೈಸ್ತರಾಗಿರದೆ, ರೋಮಾಯದ ಪ್ರಭಾವಶಾಲಿಗಳು ಜನರೂ ಸಹ ಇದ್ದರು![24] ಕೊರಿಂಥದ ಪ್ರಾಚೀನ ದಾಖಲೆಗಳಲ್ಲಿ ಇವರ ಹೆಸರುಗಳು ಇರುತ್ತವೆ. ಕೊರಿಂಥದಲ್ಲಿದ ಅದ್ಭುತವಾದ ನಾಟಕದ ಆಲಯದ ಮುಂಭಾಗದಲ್ಲಿ ಬರವಣಿಗೆಯಿಂದ ಕೂಡಿರುವ ಕಲ್ಲಿನ ಹಲಿಗೆಗಳು ಇರುವವು: "ಇದರ ಸ್ಮರಣಾರ್ಥವಾಗಿ[25] ಎರಸ್ತನು, ತನ್ನ ಸ್ವಂತ ಖರ್ಚಿನಿಂದ ಇದನ್ನು ಮಾಡಿದನು" ಎಂಬ ಬರವಣಿಗೆಯಿದೆ. ಮೂಲದಲ್ಲಿ ಅದರ ಅಕ್ಷರಗಳನ್ನು ಹಿತ್ತಾಳೆಯಿಂದ ತುಂಬಿಸಿದ್ದರು, ಈಗ ಅದನ್ನು ಸೀಸದಿಂದ ತುಂಬಿಸಲಾಗಿದೆ. ಈ ದಿನ ಟೊಳ್ಳುಗಳಿಂದ ಕೂಡಿದ ಅಕ್ಷರಗಳು ಇದ್ದರೂ ಕೂಡ ತುಂಬಾ ಸುಲಭವಾಗಿ ಅದನ್ನು ಓದಬಹುದು.

ಪೌಲನ "ಅನೇಕ ದಿವಸಗಳ ತಂಗುವಿಕೆಯ" ಸಮಯದಲ್ಲಿ, ಕೊರಿಂಥದಲ್ಲಿ ಸುವಾರ್ತೆಯನ್ನು ಸಾರಿ, ಅಖಾಯದ[26] ಸುತ್ತಲೂ ಸಭೆಗಳನ್ನು ಸ್ಥಾಪಿಸಿರಬಹುದು. ಆ ಸಮಯದಲ್ಲಿಯೇ 2 ಥೆಸಲೋನಿಕ ಪತ್ರಿಕೆಯನ್ನು ಬರೆದಿರಬಹುದು.[27] ಪೌಲನು ರೋಮಾ ಯರಿಂದಲೂ, ಯೆಹೂದ್ಯರಿಂದಲೂ ಹಿಂಸೆ ಅನುಭವಿಸಿದರೂ, ಆಶೀರ್ವಾದದ ಪ್ರತಿಫಲವನ್ನು

ಹೊಂದಿದನು, ಎಷ್ಟೋ ಸಾರಿ ಯೇಸುವಿನ ವಾಗ್ದಾನವನ್ನು ಅವನು ಪ್ರತಿಬಿಂಬಿಸಿರಬಹುದು - ಅದ್ಭುತವಾಗಿ ಅವುಗಳು ನೆರವೇರಿದವು!

ವಚನ 18ನೇ ಅಂತ್ಯದಲ್ಲಿ, ಲೂಕನು ವಿಚಿತ್ರವಾದ ಚಿಕ್ಕ ಹೇಳಿಕೆಯನ್ನು ನೀಡಿದನು: "ಕೆಂಖ್ರೆಯಲ್ಲಿ ಪೌಲನು ಕ್ಷೌರಮಾಡಿಸಿಕೊಂಡನು," ತನಗೆ ದೀಕ್ಷೆ ಇದದ್ದರಿಂದ ಇದನ್ನು ಮಾಡಿದನು! ಅವನ ಶಪಥದ ಕುರಿತು ಪಂಡಿತರುಗಳು, ಗೊಂದಲಕ್ಕೊಳಾಗಿರುವರು.[28] ಈ ಪ್ರಶ್ನೆಗಳಿಗೆ ಲೂಕನು ಉತ್ತರ ನೀಡಿರುವದಿಲ್ಲ. ದೈವೀಕ ಬಿಡುಗಡೆಗೆ ಕೃತಜ್ಞತೆ ಹೇಳಲು ಶಪಥ ಮಾಡಿರಬಹುದು; ಒಂದು ವೇಳೆ ಪೌಲನು, ಕರ್ತನೇ ನೀನು ವಾಗ್ದಾನಗಳನ್ನು ನೆರವೇರಿ ಸಿದಕ್ಕಾಗಿ "ನಿನಗೆ ವಂದನೆ" ಎಂದು ಶಪಥದ ಮೂಲಕ ಹೇಳುತ್ತಿರಬಹುದು!

ಪೌಲನು ಅಖಾಯದ ಸುತ್ತ ಸಾರುವಾಗ, ನಾವು ಧ್ಯಾನ ಮಾಡಿರುವ ಕಥೆಯನ್ನೇ ಹೇಳಿರ ಬಹುದು, ಈ ವಿಧವಾಗಿ ಅವನ ಮಾತುಗಳನ್ನು ಅಂತ್ಯಗೊಳಿಸಿರಬಹುದು. "ದೇವರು ತಾನು ಮಾಡುವ ಪ್ರತಿಯೊಂದು ವಾಗ್ದಾನಗಳನ್ನು ಯಾವಾಗಲೂ ನೆರವೇರಿಸುವನು! ನೀವು ಅದನ್ನು ಅವಲಂಭಿಸಬಹುದು!"

## ಮುಕ್ತಾಯ (18:18-22)

ವಚನ 18ರಿಂದ 22ರವರೆಗಾಗಿ ವಾಕ್ಯವನ್ನು ಪೌಲನ ಎರಡನೇ ಸೇವಾ ಪ್ರಯಾಣ ವೆಂದು ಪರಿಗಣಿಸಬಹುದು, "ಪೌಲನು ಇನ್ನು ಅನೇಕ ದಿವಸ ಅಲ್ಲಿದ್ದ ಮೇಲೆ ಸಹೋದರ ರಿಂದ ಅಪ್ಪಣೆ ತೆಗೆದುಕೊಂಡು, ಹಡಗನ್ನು ಹತ್ತಿ ಸಿರಿಯಕ್ಕೆ ಹೊರಟನು" (ವಚನ 18ಎ). ಕೊರಿಂಥದಲ್ಲಿ ತನ್ನ ಕೆಲಸವನ್ನು ತೀರಿಸಿದ ನಂತರ, ಪೌಲನು ಸಿರಿಯದ ಅಂತಿಯೋಕ್ಯಕ್ಕೆ ಬಂದನು, ಮೂರು ವರ್ಷಗಳ ಹಿಂದೆ ಅಲ್ಲಿ ಸೇವೆಯನ್ನು ಪ್ರಾರಂಭಿಸಿದ್ದನು. ಅವನ ಸಂಗಡ - ಜೊತೆ ಕ್ರೈಸ್ತರಾದ, ಅವನ ಸ್ನೇಹಿತರಾದ, "ಅವನ ಜೊತೆಯಲ್ಲಿ ಗುಡಾರ ನೇಯುತ್ತಿದ್ದ ಅಕ್ವಿಲ ಮತ್ತು ಪ್ರಿಸ್ಕಿಲ್ಲರು[29] ಪ್ರಯಾಣ ಬೆಳೆಸಿದರು" (ವಚನ 18ಬಿ).

ಪ್ರಿಸ್ಕಿಲ್ಲ ಮತ್ತು ಅಕ್ವಿಲರ ಹೆಸರನ್ನು ಮಾತ್ರ ನಮೂದಿಸಿರುವದರಿಂದ, ಪ್ರಾಯಶಃ ಕೊರಿಂಥದ ಸೇವೆಯನ್ನು ಮುಂದುವರಿಸಲು ಸೀಲ ಮತ್ತು ತಿಮೊಥೆಯರನ್ನು ಹಿಂದಕ್ಕೆ ಬಿಟ್ಟು ಬಂದಿರಬಹುದು. ಸೀಲನು ಕೊರಿಂಥದಲ್ಲಿದ್ದನು ಎಂದು ಕೊನೆಯ ಸಾರಿ (ವಚನ 5) ಕಾಣುತ್ತೇವೆ. ಪೌಲನ ಸಂಗಡ ಸೆರೆಮನೆಯಲ್ಲಿ ಸ್ತುತಿಪದಗಳನ್ನು ಹಾಡಿದ ಈ ಮನುಷ್ಯನ ವಿಚಾರವನ್ನು ಬಿಟ್ಟು ಹೋಗುವ ಮೊದಲು, ಅವನು ಎರಡನೇ ಸೇವಾ ಪ್ರಯಾಣದಲ್ಲಿ ನೀಡಿದ ಸೇವೆಯನ್ನು ಸ್ಮರಿಸಲೇಬೇಕು. ನಂತರ ಅವನು ಪೇತ್ರನ ಸಂಗಡ ಮಾಡಿದ ಅಲ್ಪ ಸೇವೆ ಯನ್ನು ಮಾತ್ರ ನೋಡುತ್ತೇವೆ (1 ಪೇತ್ರ 5:12). ಅವನು ನಂಬಿಗಸ್ತನಾದ ಸೇವಕನಾಗಿ ಮುಂದುವರೆದನು ಎಂಬ ಭರವಸವನ್ನು ನಾವು ಹೊಂದಿದ್ದೇವೆ.

ಪೌಲ ಮತ್ತು ಅವನ ಸಂಗಡಿಗರು ಕೆಂಖ್ರೆಯಿಂದ ಸಮುದ್ರ ಪ್ರಯಾಣ ಮಾಡಿ (ವಚನ 18), ಸಾರೋನಿಕದ ದಂಡೆಯಲ್ಲಿದ್ದ ಕೊರಿಂಥದ ಪ್ರಮುಖ ಪಟ್ಟಣಕ್ಕೆ ಬಂದರು. ಕೆಂಖ್ರೆಯಲ್ಲಿದ್ದ ಸಭೆಯ ಬಗ್ಗೆ ನಂತರ ಓದುತ್ತೇವೆ (ರೋಮಾಪುರ 16:1), ಬಹುಶಃ ಪೌಲನು ಕೊರಿಂಥದ ಸೇವೆಯಲ್ಲಿ ಅದು ಸ್ಥಾಪಿತವಾಗಿರಬಹುದು. ಅವರು ಮೊದಲನೆಯದಾಗಿ ಎಫೆಸದಲ್ಲಿ ಇಳುಕೊಂಡರು (ವಚನ 19ಎ). ಆಸ್ಯವು ರೋಮಾ ಪ್ರಾಂತದ ರಾಜಧಾನಿಯಾಗಿರಬಹುದು ಮತ್ತು ಇಲ್ಲಿಗೆ ಬರಬೇಕೆಂದು ಪೌಲನು ಈ ಹಿಂದೆ ಯೋಜನೆ ಮಾಡಿದ್ದನು. ಆ ಸಮಯದಲ್ಲಿ ಪೌಲನು ಅಲ್ಲಿಗೆ ಹೋಗದಂತೆ ಕರ್ತನು ಅವನನ್ನು ತಡೆದಿದ್ದನು (16:6). ಈ ತಡೆಯು ತೆಗೆಯಲ್ಪಟ್ಟಿತು. ಪೌಲನ ಅಲ್ಪಕಾಲದ ತಂಗುವಿಕೆಯಲ್ಲಿ ಎಫೆಸದ[30] ಯೆಹೂದ್ಯರ ಪ್ರತಿಕ್ರಿಯೆಯ ಬಗ್ಗೆ ಪರಿಶೀಲನೆ ಮಾಡಿದನು.

ತಾನು ಸಭಾ ಮಂದಿರದೊಳಕ್ಕೆ ಹೋಗಿ ಯೆಹೂದ್ಯರ ಸಂಗಡ ವಾದಿಸಿದನು.[31] ಅವರು

> ಅವನನ್ನು ಇನ್ನೂ ಕೆಲವು ಕಾಲ ಇರಬೇಕೆಂದು ಕೇಳಿಕೊಂಡಾಗ[32] ಅವನು ಒಪ್ಪದೆ - ದೇವರ ಚಿತ್ತವಾದರೆ ತಿರಿಗಿ ನಿಮ್ಮ ಬಳಿಗೆ ಬರುತ್ತೇನೆಂದು[33] ಹೇಳಿ ಅವರ ಅಪ್ಪಣೆ ತೆಗೆದುಕೊಂಡು ಹೋದನು (18:19ಸಿ-21).

ಪೌಲನು ಅಕ್ವಿಲ ಮತ್ತು ಪ್ರಿಸ್ಕಿಲ್ಲರನ್ನು ಎಫೆಸದಲ್ಲಿ ಅವನ ಹಿಂದಿರುಗುವಿಕೆಗಾಗಿ, ನೆಲವನ್ನು ಸಿದ್ಧ ಮಾಡಲು ಬಿಟ್ಟು ಹೋದನು (ವಚನ 19ಬಿ).[34] ಇನ್ನೊಂದು ತಿಂಗಳು ಸಮುದ್ರ ಪ್ರಯಾಣ ಮಾಡಿದ ನಂತರ, ಅವನ ಹಡಗು ಕೈಸರೈಯಕ್ಕೆ ತಲುಪಿತು, ಅದು ಸುವಾರ್ತಿಕನಾದ ಫಿಲಿಪ್ಪನ ಹಾಗೂ ಶತಾಧಿಪತಿಯಾದ ಕೊರ್ನೇಲ್ಯನು ವಾಸಿಸಿದ್ದ ಪಟ್ಟಣವಾಗಿತ್ತು (8:40; 10:1; 21:8). "ನಂತರ ಅವನು ಯೆರೂಸಲೇಮಿಗೆ ಹೋಗಿ ಸಭೆಯನ್ನು ವಂದಿಸಿದನು" (18:22ಎ) ಕೈಸೆರೆಯಲ್ಲಿ ಸಭೆಯ ಸ್ಥಾಪನೆಯಾಗಿತ್ತು ಎಂಬುದಕ್ಕೆ ಇದು ಸೂಚನೆಯು ಮತ್ತು ಯೆರೂಸಲೇಮಿನ ಸಭೆಗೂ ಇದು ಸೂಚನೆಯಾಗಿದೆ.[35] ಅಂತಿಮವಾಗಿ, ಅವನು "ಅಂತಿಯೋಕ್ಯಕ್ಕೆ ಬಂದನು" (ವಚನ 22ಬಿ); ಪುನಃ ಅವನಿಗೆ ಆದರಾದ ಸ್ವಾಗತ ದೊರಕಿತು ಎಂಬುದರಲ್ಲಿ ಸಂದೇಹವೇ ಇರುವದಿಲ್ಲ. ನಂತರ ಅವನು "ದೇವರು ಮಾಡಿದ ಸಕಲ ಕಾರ್ಯಗಳ ಕುರಿತು" ವರದಿ ಸಲ್ಲಿಸಿದನು (14:27). ಈ ಮೂರು ವರ್ಷಗಳ ಕಾಲ ಅವನು ಮತ್ತು ಅವನ ಸಂಗಡಿಗರು ಗ್ರೀಸ್ ದೇಶದಲ್ಲಿ ಸೇವೆ ಮಾಡಿದ್ದರು. ಕೊರಿಂಥದಲ್ಲಿ ಬಿಡುಗಡೆಯಾದ ವಿಷಯವನ್ನು ತನ್ನ ವರದಿಯಲ್ಲಿ ತಿಳಿಸಿದನು, "ಪುನಃ ಅವನು ದೇವರು ವಾಗ್ದಾನಗಳನ್ನು ಈಡೇರಿಸುವನು! ಮತ್ತು ಅದರಲ್ಲಿ ನೀವು ಭರವಸವಿಡಬಹುದು ಅಂದನು!"

ಈ ಪಾಠವನ್ನು ಅಂತ್ಯಗೊಳಿಸುವಾಗ, ಇದರಲ್ಲಿ ನಾವು ಕಲಿತ ಪಾಠಗಳನ್ನು ಪುನಃ ವಿಮರ್ಶಿಸೋಣ. ದೇವರು ತನ್ನ ಜನರೊಂದಿಗೆ ನಿಲ್ಲುವನು (ಯೆಶಾಯ 41:10; ಇಬ್ರಿಯ 13:5). ಮತ್ತೊಂದು ಏನೇಂದರೆ ಪ್ರಸಂಗ ಮತ್ತು ಬೋಧನೆಯಲ್ಲಿ ನಾವು ನಂಬಿಗಸ್ತರಾಗಿದ್ದರೆ, ದೇವರು ಅದನ್ನು ಬೆಳೆಸುವನು (1 ಕೊರಿಂಥ 3:6, 7). ದೇವರು ನಮ್ಮನ್ನು ಕರೆದಿರುವ ಸ್ಥಳವು ಕೊರಿಂಥಕ್ಕಿಂತಲೂ ಉತ್ತಮವಾಗಿರುತ್ತದೆ! ದೇವರು ತನ್ನ ವಾಗ್ದಾನಗಳನ್ನು ಯಾವಾಗಲೂ ನೆರವೇರಿಸುವನು ಎಂಬುದು ಮುಖ್ಯ ಪಾಠವಾಗಿ, ನೀವು ಆತನ ವಾಗ್ದಾನಗಳನ್ನು ಹಾಗೂ ಈ ವಿಧವಾದ ವಾಗ್ದಾನಗಳನ್ನು ನಂಬಬಹುದು:

> ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ (ರೋಮಾಪುರ 8:28).
>
> ಹಾಗಾದರೆ ಈ ವಿಷಯಗಳಲ್ಲಿ ನಾವು ಏನು ಹೇಳೋಣ? ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು? (ರೋಮಾಪುರ 8:31).

ನಾನು ದೇವರ ವಾಗ್ದಾನಗಳಲ್ಲಿ ಭರವಸೆ ಇಟ್ಟಿರುವೆನು? ನೀವುಗಳು?[36]

---

ಟಿಪ್ಪಣೆಗಳು

[1]ದೇವರು ತನ್ನ ಉದ್ದೇಶದ ನಿಮಿತ್ತ ಕೊರಿಂಥದಲ್ಲಿ ಅನೇಕ ಜನರನ್ನು ತನಗಾಗಿ ಹೊಂದಿದ್ದನು. ರಕ್ಷಿಸಲ್ಪಡುವವರು ಹಾಗೂ ನಾಶವಾಗುವವರ ಕುರಿತು ದೇವರು ಮುಂದಾಲೋಚನೆ ಹೊಂದಿರುವನೆಂದು ವಾಕ್ಯ ಭಾಗವು ತಿಳಿಸುವದಿಲ್ಲ. ಪರಿವರ್ತನೆಗೊಂಡವರ ವಿಷಯದಲ್ಲಿ ಸುವಾರ್ತೆಯನ್ನು ಸ್ವೀಕರಿಸಲು ಅಥವಾ ತಿರಸ್ಕರಿಸಲು ಅವರವರಿಗೆ ಸ್ವಾತಂತ್ರ್ಯ ಉಂಟು. [2]ಸಕಲವನ್ನು ಅರಿತಿರುವ ದೇವರು ಪೌಲನ ಸುವಾರ್ತೆಗೆ ಸ್ಪಂಧಿಸುವವರ ಕುರಿತು ಮುಂದಾಗಿಯೇ ತಿಳಿದಿದ್ದನು. [3]ಈಗಾಗಲೇ ಅನೇಕರು ದೀಕ್ಷಾಸ್ನಾನ ಹೊಂದಿದ್ದರು (ವಚನ 8). ಪೌಲನ ಲಾಭಕ್ಕಾಗಿ ದೇವರು

ಅವನಿಗೆ ಸುರಕ್ಷೆಯನ್ನು ನೀಡದೆ ಕೊರಿಂಥದಲ್ಲಿ ಅನೇಕರ ಲಾಭಕ್ಕಾಗಿ ಸುರಕ್ಷೆಯನ್ನು ನೀಡಿದ್ದನು. ಆತ್ಮಗಳಿಗೆ ಸುವಾರ್ತೆಯನ್ನು ಸಾರಲು ದೇವರು ಪೌಲನನ್ನು ಕೊರಿಂಥ ದಲ್ಲಿಟ್ಟಿದ್ದನು. [4]ಕೊರಿಂಥದಲ್ಲಿ ಪೌಲನು ಕಳೆದಿದ್ದ ಸಮಯದ ಬಗ್ಗೆ ವಚನ 11 ತಿಳಿಸುತ್ತದೆ - ಒಂದು ವೇಳೆ ಪೌಲನು ಒಂದೂವರೆ ವರ್ಷಕ್ಕಿಂತ ಹೆಚ್ಚು ಕಾಲ ಇದ್ದಿರಬಹುದು. [5]ಕೆಟ್ಟ ಸಂಗತಿಗಾಗಿ ಇಲ್ಲಿ ಐಕ್ಯವಾದರು (5:9). ಐಕ್ಯತೆಯು ಪ್ರಮುಖವೇ, ಆದರೆ ದೇವರ ಚಿತ್ತವನ್ನು ನೆರವೇರಿಸುವದಕ್ಕಿಂತಲೂ ಮುಖ್ಯವಲ್ಲ. [6]ಟಕಟಿಕಾಸನನ್ನು, ಪ್ಲೀನಿಯನ್ನು ಸೇನೆಕನನ್ನು ಸೇರ್ಪಡೆ ಮಾಡಿರುವರು. [7]ಈ ದಿನಾಂಕದ ಸಹಾಯದಿಂದ ಅಪೊಸ್ತಲರಕೃತ್ಯಗಳು ಹಾಗೂ 1 ಮತ್ತು 2 ಥೆಸಲೋನಿಕದ ಹಿನ್ನಲೆಯನ್ನು ತಿಳಿಯುತ್ತೇವೆ. ಕ್ರಿ.ಶ. 50ರಿಂದ 52ರವರೆಗೆ ಪೌಲ ಕಾರ್ಯ ಪ್ರವೃತ್ತಿಯಲ್ಲಿದ್ದನೆಂದು ತಿಳಿಯುತ್ತೇವೆ. [8]ಕೊರಿಂಥವು ಅಖಾಯದ ರೋಮಾಪುರ ಪ್ರಾಂತದ ರಾಜಧಾನಿಯಾಗಿತ್ತು. [9]ಪೌಲನಿಗೆ ಅವಕಾಶ ದೊರೆತಿದ್ದರೆ, ಆ ವೇದಿಕೆಯಿಂದ ಪ್ರಸಂಗಿಸುತ್ತಿದ್ದನು. [10]NIV ಯಲ್ಲಿ "ನಮ್ಮ ನಿಯಮ" ಎಂಬುದಾಗಿದೆ.

[11]ಲಿಲಿಜಿಯೋಲಿಸಿಟಾ. [12]ಯೆಹೂದ್ಯರ ಮತ್ತು ಕ್ರೈಸ್ತರ ನಡುವಿನ ಹೋರಾಟದ ಬಗ್ಗೆ ಗಲ್ಲಿಯೋನನು ಅರಿತಿದ್ದನು. ಬಹುಶಃ ಅವರ ದೂರಿನಲ್ಲಿ, ಯೆಹೂದ್ಯರು ನಿರ್ಧಿಷ್ಟವಾದ "ಪದಗಳನ್ನು ಹಾಗೂ ಹೆಸರುಗ ಳನ್ನು" ತಿಳಿಸಿದ್ದರು. "ರಕ್ಷಣೆ" ಹಾಗೂ "ಪುನರುತ್ಥಾನ" ಎಂಬ ಪದಗಳನ್ನು "ಯೇಸು" ಹಾಗೂ ಕ್ರಿಸ್ತನು ಎಂಬ ಹೆಸರುಗಳನ್ನು ಹೇಳಿರಬಹುದು. [13]ರೋಮಾಯರು ಯೆಹೂದ್ಯರನ್ನು ದ್ವೇಷಿಸಿದ್ದರೆಂಬ ರಾಜಕೀಯ ತತ್ವವನ್ನು ಗಲ್ಲಿಯೋನನು ಅರಿತಿದ್ದನು (18:2). ಅಂತಹ ಪರಿಸ್ಥಿತಿಯಲ್ಲೂ ಅವನು ಆಡಳಿತ ನಡೆಸಿದನು. [14]"ನೇಮ" ಎಂಬ ಪದವು ವಚನ 13ರಲ್ಲಿ ತಿಳಿಸಿರುವ ರೋಮಾಯರ ನಿಯಮ ಎಂಬುದು ನನ್ನ ಅಭಿಪ್ರಾಯ, ಯಾಕಂದರೆ ಅಧಿಪತಿಯು ಅದನ್ನೇ ಅವಲಂಭಿಸಿದ್ದನು. [15]16:22, 23, 35, 38ರ ಟಿಪ್ಪಣಿ ನೋಡಿರಿ. [16]18:8ರ ಟಿಪ್ಪಣಿ ನೋಡಿರಿ. [17]17:5ರ ಯಥಾರ್ಥ ಹೃದಯಗಳ ಟಿಪ್ಪಣಿ ನೋಡಿರಿ. [18]ಸೋಸ್ಥೆನನ್ನು ಹೊಡೆದ ವಿಚಾರದಲ್ಲಿ ಗಲ್ಲಿಯೋನನು ನಿರಾಸಕ್ತಿವಹಿಸಿದನು ಯಾಕಂದರೆ ಅವನು ನ್ಯಾಯಬದ್ಧವಾಗಿರಬಹುದು. ಅದು "ಅಪರಾಧದ ಶಿಕ್ಷೆ" ಎಂದು ತಿಳಿದಿದ್ದನು. [19]William Barclay, *The Acts of the Apostles,* rev. ed. (Philadelphia: Westminster Press, 1976), 137. [20]ಗಲ್ಲಿಯೋನನಿಂದ ಪೌಲನಗೆ ನ್ಯಾಯವಾದ ನಿರ್ಣಯ ದೊರಕಿದ್ದರಿಂದ ನಂತರ ರೋಮಾಯರಿಗೆ ಬೇಡಿಕೊಂಡಿದ್ದನು (25:11).

[21]Rick Atchley, "Taking Courage and Taking Corinth," Sermon preached at the Southern Hills church of Christ, Abilene, Tex., 19 October 1986. [22]ಪೌಲನು ಕೊರಿಂಥದಲ್ಲಿ ಹೆಚ್ಚು ಕಾಲವಿದದ್ದರಿಂದ ಕೊರಿಂಥ ಸಭೆಗೆ ಉತ್ತಮವಾದ ಬೋಧನೆಯು ದೊರಕಿತು. ಸಭಾ ಸಮಸ್ಯೆಗಳಿಗೆ 1 ಕೊರಿಂಥ ಪತ್ರಿಕೆಯನ್ನು ಓದುವರು. ಅವರಿಗೆ ಆ ಬೋಧನೆ ದೊರಕದಿದ್ದರೆ ಅವರು ಇನ್ನೂ ಹೆಚ್ಚಿನ ಕೆಟ್ಟ ಪರಿಣಾಮಗಳನ್ನು ಎದುರಿಸಬೇಕಿತ್ತು. ಅವುಗಳು ಅನೈತಿಕ ಕೊಳದಿಂದ ಎತ್ತಲ್ಪಟ್ಟವರಾಗಿದ್ದರೆಂದು ನಾವು ಅರಿಯಬೇಕು. [23]ನಾನು ಕೊರಿಂಥಕ್ಕೆ ಬೇಟಿ ನೀಡಿದಾಗ "ಸೋಸ್ಥೆನನು" ಎಂಬ ಬರವಣಿಗೆಯ ಕಲ್ಲನ್ನು ನೋಡಿ ದೆನು 1 ಕೊರಿಂಥ 1:1. [24]2 ತಿಮೊಥೆ 4:20ರಲ್ಲಿ "ಎರಸ್ತನು" ಎಂಬುದಾಗಿರುವದರಿಂದ, ಅವನು ಪೌಲನ ಸಂಗಡ ಪ್ರಯಾಣ ಮಾಡಿರಬಹುದು. ಆ ಮನುಷ್ಯನು ಇವನೇ ಆಗಿರಬಹುದು. [25]"ಏಡೆಲ್" ಅಂದರೆ ಲ್ಯಾಟಿನ್ ಭಾಷೆಯ "ಖಜಾನೆಯ ಮೇಲ್ವಿಚಾರಕನು" (ರೋಮಾಪುರ 16:23). [26]2 ಕೊರಿಂಥ 1:1ರಲ್ಲಿ ಅಖಾಯದ "ಸಕಲ ದೇವಜನರು, ಖಂಡಿತವಾಗಿ ಕೊರಿಂಥದಲ್ಲಿ ಸಭೆಯು ಸ್ಥಾಪನೆಗೊಂಡಿತು" (2 ಕೊರಿಂಥ 1:1). ಕೆಂಖ್ರೆಯಲ್ಲಿ ಸಭೆಯಿತ್ತು (ರೋಮಾಪುರ 16:1). ಅಥೇನೆಯಲ್ಲೂ ಸಭೆ ಇತ್ತು. 17:34ರ ಟಿಪ್ಪಣಿ ಆ ಪ್ರಾಂತದಲ್ಲಿ ಹೆಚ್ಚಿನ ಕ್ರೈಸ್ತರಿರಬಹುದು. [27]ನೋಡಿರಿ ಟಿಪ್ಪಣಿಗಳಲ್ಲಿ 1 ಮತ್ತು 2 ಥೆಸಲೋನಿಕದ, ಕಾಲವನ್ನು ಪರಿಶೀಲಿಸಿ. [28]ಅವನು ತಾತ್ಕಾಲಿಕ ನಜರಾಯನಾಗಿದ್ದನು (ಅರಣ್ಯಕಾಂಡ 6:1-21), ಆದರೆ ಶಪಥದ ನಂತರ ತಲೆ ಕೂದನ್ನು ತೆಗೆಯುತ್ತಿದ್ದರು, ಅದನ್ನು ಯೆರುಸಲೇಮಿನಲ್ಲಿ ಕತ್ತರಿಸುತ್ತಿದ್ದರು. ಪೌಲನ ಈ ಕೃತ್ಯಕ್ಕೆ ಅವನ ಯೆಹೂದ್ಯ ಹಿನ್ನೆಲೆ ಇತ್ತು. ಸಹಜವಾಗಿ ಪೌಲನು ಅದನ್ನು ಆಚರಿಸುತ್ತಿದ್ದನು, ಅದು ಅವನನ್ನು ಕ್ರೈಸ್ತತ್ವದಿಂದ ಪ್ರತ್ಯೇಕಿಸಲಿಲ್ಲ (1 ಕೊರಿಂಥ 9:20). 21:23ರ ಮುಂದಿನ ಪಾಠದ ಟಿಪ್ಪಣಿಯನ್ನು ನೋಡಿರಿ. [29]ಪ್ರಿಸ್ಕಿಲ್ಲಳ ಹೆಸರು ಮೊದಲನೆಯದಾಗಿ ಹೆಸರಿಸಿರುವದರಿಂದ, ಸಭೆಯಲ್ಲಿ ಆಕೆ ಪ್ರಾಮುಖ್ಯತೆಯನ್ನು ಹೊಂದಿರಬಹುದು ರೋಮಾಪುರ 16:3; 2 ತಿಮೊಥೆ 4:19. [30]ಎಫೆಸದಲ್ಲಿ ಪೌಲನು ಏಕೆ ಸ್ವಲ್ಪಕಾಲ ಮಾತ್ರ ಇದ್ದನು, ಕಾರಣ ಅರಿಯೆವು. ಅವನು ಯೆರುಸಲೇಮಿನ ಪಸ್ಕಕ್ಕೆ ಹಾಜರಾಗಬೇಕಿತ್ತು. ಎಂಬ ಅಭಿಪ್ರಾಯವಿದೆ. ಅವನ ಹಡಗು ಎಫೆಸದಲ್ಲಿ ಹೆಚ್ಚು ಸಮಯ ಇರದೆ ಇದ್ದ ಕಾರಣವೂ ಇರಬಹುದು, ಅದು ಹಳೇ ಸರಕನ್ನು ಇಳಿಸಿ, ಹೊಸ ಸರಕನ್ನು ಎಫೆಸದಿಂದ ಸಾಗಿಸುತ್ತಿತ್ತು.

[31]ಅದು ಆಗಾಗ್ಗೆ ಆಗಲಿಲ್ಲ (13:42)! [32]ವೆಸ್ಟರ್ನ್ ಟೆಕ್ಸ್ಟ್ ಪ್ರಕಾರ KJV ಯಲ್ಲಿ ನಾನು

ಯೆರೂಸೇಮಿಗೆ ಬರಲೇಬೇಕು, ಅವುಗಳಿಗೆ ಸಾಕ್ಷಿ ಇಲ್ಲ. [33]"ದೇವರ ಚಿತ್ತವಿದ್ದರೆ" (ಯಾಕೋಬ 4:13-15; ಮತ್ತಾಯ 6:10; ರೋಮಾಪುರ 1:10; 15:32; 1 ಕೊರಿಂಥ 4:19; 16:7; ಇಬ್ರಿಯ 6:3), ದೇವರ ಚಿತ್ತದ ಪ್ರಕಾರ ಪೌಲನು ಹಿಂದಿರುಗಿದನು (ಅಪೊಸ್ತಲರ ಕೃತ್ಯಗಳು 19:1). [34]ಅಕ್ವಿಲ ಮತ್ತು ಪ್ರಿಸ್ಕಿಲ್ಲರು ಎಫೆಸದಲ್ಲಿ "ಒಂದು ಸಹ ಕಚೇರಿಯನ್ನು" ತೆರೆಯಲು ಬಯಸಿರಬಹುದು, ಅದು ಗುಡಾರ ನೇಯುವ ಕಾರ್ಯಗಾರವಾಗಿರಬಹುದು. ಅವರು ಆ ಸ್ಥಳದಲ್ಲಿ ಬಹಳಕಾಲ ಇದ್ದರು. ಕ್ರಿಸ್ತನ ಸೇವೆ ಮಾಡಿದರು (ಅಪೊಸ್ತಲ ಕೃತ್ಯಗಳು 18:26; 1 ಕೊರಿಂಥ 16:19). [35]ಹಿನ್ನಲೆಯು ಕೈಸಕೈಯಕ್ಕೆ ಒಪ್ಪುತ್ತದೆ ಮೇಲಕ್ಕೆ ಕೆಳಕ್ಕೆ ಹೋಯಿತು. ಎಂಬುದು ಯೆರುಸಲೇಮಿಗೆ ಒಪ್ಪುತ್ತದೆ (8:5; 9:30, 32; 11:2, 27; 13:31; 15:1, 2, 30). [36]ಪ್ರಸಂಗದಲ್ಲಿ ಇದನ್ನು ಬಳಸುವುದಾದರೆ, ದೇವರ ರಕ್ಷಣೆಯ ವಾಗ್ದಾನಗಳನ್ನು ಸೇರಿಸಬಹುದು, ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38; ಆ ವಚನದವಾಗ್ದಾನವನ್ನು ನಂಬಿದರೆ, ಆ ವಚನದ ಆದೇಶವನ್ನು ಪಾಲಿಸುತ್ತೇವೆ.